ಸಿ.ಸಿ. ನಂ.- 1132/23

ಸಿ.ಡಬ್ಲ್ಯೂ.- 22 / ಪಿ.ಡಬ್ಲ್ಯೂ.- 11

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 27-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಡಾ. ರಾಜಶೇಖರ್ |
| ತಂದೆಯ ಹೆಸರು - | ಮಲ್ಲಪ್ಪ |
| ವಯಸ್ಸು - | 37 ವರ್ಷಗಳು |
| ಉದ್ಯೋಗ - | ವೈದ್ಯಾಧಿಕಾರಿ, ಮೈಲಾರ ಆಸ್ಪತ್ರೆ, ಹೊಸಪೇಟೆ |
| ವಾಸಸ್ಥಳ - | ಹೊಸಪೇಟೆ. |

ಮುಖ್ಯ ವಿಚಾರಣೆ-ಮಾನ್ಯ ಎ. ಪಿ. ಪಿ. ಅವರಿಂದ-

ನಾನು ದಿಃ 10.08.2023 ರಿಂದ 28.09.2025 ರವರೆಗೆ ಹೊಸಪೇಟೆಯ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ದೇವರಾಜ ಎಂಬ ಹೆಸರಿನ ಹಂಚಿನಾಳ ಗ್ರಾಮದ ಒಬ್ಬ ಗಾಯಾಳು ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ದಿಃ 15.08.2023 ರಂದು ಮಧ್ಯಾಹ್ನ 1.15 ಗಂಟೆಗೆ ಆಸ್ಪತ್ರೆಗೆ ಬಂದಿರುತ್ತಾರೆ. ಅವರು ನೀಡಿದ ಮಾಹಿತಿಯಂತೆ ಅದೇ ದಿನ ಬೆಳಿಗ್ಗೆ 11.30 ಗಂಟೆಗೆ ಅಪಘಾತ ಆಗಿರುತ್ತದೆ ಎಂದು ನನಗೆ ತಿಳಿಯಿತು. ಸದರಿ ವ್ಯಕ್ತಿಯನ್ನು ನಾನು ಪರೀಕ್ಷಿಸಿದಾಗ ಎಡ ಮೊಣಕಾಲಿನ ಮೇಲೆ ಮಲ್ಟಿಪಲ್ ಅಬ್ರೇಷನ್ ಹಾಗೂ ಮೇಲಿನ ಮತ್ತು ಕೆಳ ತುಟಿಗೆ ಬಾವು ಆಗಿರುತ್ತದೆ. ಸದರಿ ಪರೀಕ್ಷೆಯ ಆಧಾರದ ಮೇಲೆ ಸದರಿ ಗಾಯಗಳು ಸಾಧಾರಣ ಸ್ವರೂಪದ್ದು ಎಂದು ನನಗೆ ತಿಳಿಯಿತು. ಗಾಯಾಳು ನನಗೆ ಬೇರೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ. ಈ ಕುರಿತು ನಾನು ಪೊಲೀಸರಿಗೆ ವರದಿ ನೀಡಿರುತ್ತೇನೆ, ಅದನ್ನು ನಿ.ಪಿ.- 13 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿ.ಪಿ.- 13-ಎ ಎಂದು ಗುರುತಿಸಲಾಯಿತು.

ಪಾಟೀಸವಾಲು- ಆರೋಪಿತರ ಪರ ಶ್ರೀ ಬಿ ಸಿ ಎಂ ವಕೀಲರಿಂದ -

ಆ ದಿನ ಆಸ್ಪತ್ರೆಗೆ ಗಾಯಾಳು ಒಬ್ಬರೇ ಬಂದಿದ್ದರು. ಅವರು ಯಾರ ಜೊತೆ ಬಂದಿದ್ದರು ಎಂಬ ಮಾಹಿತಿ ನನಗೆ ಅವರು ಕೊಡದ ಕಾರಣ ಗೊತ್ತಿಲ್ಲ. ನಾನು ಗಾಯದ ಪ್ರಮಾಣ ಪತ್ರವನ್ನು ಕೊಡುವ ಮುನ್ನ ಪೊಲೀಸರು ನನಗೆ ಅಪಘಾತ ಹೇಗೆ ಆಯಿತು ಎಂಬ ಮಾಹಿತಿಯ ವಿವರವನ್ನು ಕೊಟ್ಟು ಗಾಯದ ಪ್ರಮಾಣ ಪತ್ರ ನೀಡಲು ಮನವಿ ಸಲ್ಲಿಸಿದ ಆಧಾರದ ಮೇಲೆ ನಾನು ಈ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಮೊದಲಿಗೆ ಸರಿ ಎಂದು ಒಪ್ಪಿ ನಂತರ

ಸಿ.ಸಿ. ನಂ.- **1132/23**

ಸಿ.ಡಬ್ಲ್ಯೂ- **22** / ಪಿ.ಡಬ್ಲ್ಯೂ- **11**

ಗಾಯಾಳುವಿನ ಪರೀಕ್ಷೆಯ ಆಧಾರದ ಮೇಲೆ ನನಗೆ ಕಂಡ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸ್ವರೂಪದ ಗಾಯಾಳು ಒಂದು ವೇಳೆ ಮೋಟಾರ್ ಸೈಕಲ್ ನಲ್ಲಿ ಇಬ್ಬರೂ ವ್ಯಕ್ತಿಗಳು ಹೋಗುವಾಗ ಅದರ ಚಾಲಕ ವೀಲಿಂಗ್ ಮಾಡುತ್ತಿರುವಾಗ ಹಿಂದಿನ ಪ್ರಯಾಣಿಕ ಕೆಳಗೆ ಬಿದ್ದುದ್ದರಿಂದ ಸಹ ಆಗುತ್ತದೆ ಎಂದರೆ ಸಾಕ್ಷಿ ಆಗಬಹುದು ಎಂದು ನುಡಿಯುತ್ತಾರೆ. ನಾನು ಪೊಲೀಸರ ಸುಳ್ಳು ಮನವಿ ಪತ್ರದ ಆಧಾರದ ಮೇಲೆ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.